| | |
|---|---|
| ಪ್ರಾಸಾ | 03 |
| ಚಾಸಾ | 05 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

**<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ</u>**

**<u>ವಿಶೇಷ ಸತ್ರ ಪ್ರಕರಣ ಸಂಖ್ಯೆ:</u> 123/2023**

(1 ರಿಂದ 3 ನೇ ಆರೋಪಿತರನ್ನು ವಿಸಿ ಮುಖಾಂತರ ವಿಚಾರಣೆಗೆ ಹಾಜರುಪಡಿಸಲಾಗಿದೆ)

**ದಿನಾಂಕ: 12.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಪಾರ್ವತಮ್ಮ |
| ಗಂಡನ ಹೆಸರು | : | ನಾರಾಯಣಸ್ವಾಮಿ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಬೈರಗಾನಹಳ್ಳಿ |

**<u>ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-</u>**

**1.** ಮೃತ ನಾರಾಯಣಸ್ವಾಮಿ ನನ್ನ ಗಂಡ. ಚಾಸಾ-6 ನಾರಾಯಣಸ್ವಾಮಿರವರ 2 ನೇ ಹೆಂಡತಿ. ಪ್ರಾಸಾ-1, ಚಾಸಾ-6 ರವರ ಮಗ. ಚಾಸಾ-2, 3, 7, 8 ರವರು ಗೊತ್ತು. ವಿಸಿಯ ಮುಖಾಂತರ ಹಾಜರುಪಡಿಸಿದ ಆರೋಪಿತರ ಪೈಕಿ 1 ಮತ್ತು 3 ನೇ ಆರೋಪಿತರನ್ನು ನಾನು ನೋಡಿದ್ದೇನೆ. ನ್ಯಾಯಾಲಯದ ಮುಂದಿರುವ 4 ರಿಂದ 6 ನೇ

| | |
|---|---|
| ಪ್ರಾ.ಸಾ | 03 |
| ಚಾ.ಸಾ | 05 |

ಆರೋಪಿತರು ಗೊತ್ತು. 6 ನೇ ಆರೋಪಿಯು ನನ್ನ ಗಂಡನ ಸಂಬಂಧಿ.

2. ನನ್ನ ಗಂಡ ನಾರಾಯಣಸ್ವಾಮಿ ಕೂಲಿ ಕೆಲಸ ಹಾಗೂ ರಿಯಲ್ ಎಸ್ಟೇಟ್ ಕೆಲಸವನ್ನು ಮಾಡುತ್ತಿದ್ದರು. ನಮ್ಮ ಊರಿನಲ್ಲಿ ಸಣ್ಣ-ಪುಟ್ಟ ಗಲಾಟೆಗಳಾದಾಗ ನ್ಯಾಯ ಪಂಚಾಯಿತಿ ಮಾಡುತ್ತಿದ್ದರು. 6 ನೇ ಆರೋಪಿಯು 1 ನೇ ಆರೋಪಿಯ ಬಳಿ ಕೆಲಸಕ್ಕೆ ಹೋಗುತ್ತಿದ್ದಳು. ಅವರು ಅಕ್ರಮ ಸಂಬಂಧವನ್ನು ಇಟ್ಟುಕೊಂಡಿದ್ದರು. ನನ್ನ ಗಂಡ ನಾರಾಯಣಸ್ವಾಮಿ ಮರಣಹೊಂದಿದ ಸುಮಾರು ಒಂದು ವಾರ-15 ದಿನಗಳ ಹಿಂದೆ, 6 ನೇ ಆರೋಪಿಯ ಮನೆಯ ಬಳಿ 1 ನೇ ಆರೋಪಿಯು ದ್ವಿಚಕ್ರವಾಹನದಲ್ಲಿ ಬಂದು ಹಾರ್ನ್ ಮಾಡಿದ್ದನು ಎಂದು, 6 ನೇ ಆರೋಪಿಗೆ 1 ನೇ ಆರೋಪಿಯು ಫೋನ್ ನ್ನು ಬಿಸಾಡಿದ್ದನು ಎಂದು, ಅದನ್ನು ಚಾಸಾ-8 ರವರು 1 ನೇ ಆರೋಪಿಯೊಂದಿಗೆ ಕೇಳಿದಾಗ, ಹೊಡೆದಾಟವಾಗಿತ್ತೆಂದು ನಂತರ 1 ನೇ ಆರೋಪಿ ಸ್ಥಳದಿಂದ ಹೊರಟು ಹೋಗಿದ್ದನು ಎಂದು ಚಾಸಾ-8 ರವರು ತಿಳಿಸಿರುತ್ತಾರೆ. ನನ್ನ ಗಂಡ ನಾರಾಯಣಸ್ವಾಮಿರವರಿಗೆ ಚಾಸಾ-8 ರವರು ಸದರಿ ವಿಚಾರಗಳನ್ನು ತಿಳಿಸಿದ ನಂತರ, ಊರಿನಲ್ಲಿ ಸದರಿ ವಿಚಾರದ ಬಗ್ಗೆ ಮಾತನಾಡೋಣವೆಂದು ನ್ಯಾಯ ಪಂಚಾಯಿತಿ ಮಾಡಿರುತ್ತಾರೆ. 1 ನೇ ಆರೋಪಿಯು ಸದರಿ ಪಂಚಾಯಿತಿಯಲ್ಲಿ ನೀನು ಯಾವನೋ ಪಂಚಾಯಿತಿ

| | |
|---|---|
| ಪ್ರಾಸಾ | 03 |
| ಚಾಸಾ | 05 |

ಮಾಡುವುದಕ್ಕೆ, ನಿನ್ನನ್ನು ಒಂದು ಕೈ ನೋಡಿಕೊಳ್ಳುತ್ತೇನೆ ಎಂದು, ನನ್ನ ಗಂಡ ನಾರಾಯಣಸ್ವಾಮಿಗೆ ಹೇಳಿರುತ್ತಾನೆ. ನಂತರ ನನ್ನ ಗಂಡ ನಾರಾಯಣಸ್ವಾಮಿರವರು ಚಾಸಾ-8 ರವರನ್ನು ಹಾಗೂ 6 ನೇ ಆರೋಪಿಯನ್ನು ದೂರು ನೀಡಲು ಠಾಣೆಗೆ ಕಳುಹಿಸಿರುತ್ತಾರೆ. ಸದರಿ ದಿಬ್ಬೂರಹಳ್ಳಿ ಪೊಲೀಸ್ ಠಾಣೆಗೆ ಹೋದಾಗ, 6 ನೇ ಆರೋಪಿಯು ತಾನು ದೂರು ನೀಡುವುದಿಲ್ಲ, ವಿಚ್ಛೇದನ ನೀಡುತ್ತೇನೆ ಎಂದು ಚಾಸಾ-8 ರವರಿಗೆ ಹೇಳಿ, ಠಾಣೆಯಿಂದ ವಾಪಸ್ಸು ಬಂದಿದ್ದಳು. ನಂತರ ಠಾಣೆಯಲ್ಲಿ ಮುಂದೆ ಏನಾಯಿತು ಎಂದು ನನಗೆ ಗೊತ್ತಿಲ್ಲ.

3. ಘಟನೆಯ ದಿನ ಬೆಳಿಗ್ಗೆ ನನಗೆ ಹುಷಾರಿರಲಿಲ್ಲ. ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ನನ್ನ ಗಂಡ ನಾರಾಯಣಸ್ವಾಮಿರವರಿಗೆ ಹೇಳಿದ್ದೆನು. ಆದರೆ ಅವರು ನೀನು ಬಾ, ನಾನು ಶಿಡ್ಲಘಟ್ಟಕ್ಕೆ ಹೋಗಿರುತ್ತೇನೆ ಎಂದು ಹೇಳಿ, ಓಮಿನಿ ವಾಹನದಲ್ಲಿ ಬೆಳಿಗ್ಗೆ 8 ಗಂಟೆಗೆ ಮನೆಯಿಂದ ಹೋಗಿರುತ್ತಾರೆ. ನಂತರ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಶಿಡ್ಲಘಟ್ಟಕ್ಕೆ ಹೋಗೋಣವೆಂದು ದ್ಯಾವಪ್ಪನ ಗುಡಿ ಬಳಿ ನಾನು ಹಾಗೂ ನನ್ನ ಮಗ ಅಜಿತ್ ಕುಮಾರ್ ಬಂದಿರುತ್ತೇವೆ. ಆಗ 1 ನೇ ಆರೋಪಿಯು ದ್ವಿಚಕ್ರವಾಹನದಲ್ಲಿ ಬಂದು, ನಾರಾಯಣಸ್ವಾಮಿ ಠಾಣೆಯ ಬಳಿ ನನಗೆ ಹಾಗೂ ನನ್ನ

| | |
|---|---|
| ಪ್ರಾಸಾ | 03 |
| ಚಾಸಾ | 05 |

ಅಣ್ಣನಿಗೆ ಬೈದಿದ್ದಾನೆ, ಆತನನ್ನು ಒಂದು ಕೈ ನೋಡಿಕೊಳ್ಳುತ್ತೇನೆ ಎಂದು ಬೆದರಿಕೆ ಹಾಕಿರುತ್ತಾನೆ. ನಂತರ ನಾನು ಶಿಡ್ಲಘಟ್ಟಕ್ಕೆ ಆಸ್ಪತ್ರೆಗೆ ಹೋಗಿ ನಂತರ ಮನೆಗೆ ವಾಪಸ್ಸು ಬಂದಿರುತ್ತೇನೆ.

4. ಸಂಜೆ 7 ಗಂಟೆ ಆದರೂ ನನ್ನ ಗಂಡ ನಾರಾಯಣಸ್ವಾಮಿ ಮನೆಗೆ ವಾಪಸ್ಸು ಆಗಲಿಲ್ಲ. ಸಂಜೆ 7 ಗಂಟೆ ಸಮಯದಲ್ಲಿ ಚಾಸಾ-2 ಮತ್ತು ಚಾಸಾ-3 ರವರು ಬಂದು, ನಾರಾಯಣಸ್ವಾಮಿರವರನ್ನು ಸುರೇಶ್ ರವರ ಜಮೀನಿನಲ್ಲಿ ಕೊಲೆ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ. ಚಾಸಾ-2 ಮತ್ತು ಚಾಸಾ-3 ರವರು, ನಾರಾಯಣಸ್ವಾಮಿರವರು ತಮ್ಮ ಓಮಿನಿ ವಾಹನವನ್ನು ನಿಲ್ಲಿಸಿಕೊಂಡಿದ್ದಾಗ ಖಾರದ ಪುಡಿಯನ್ನು ಎರಚಿದ್ದರು ಎಂದು, ನಾರಾಯಣಸ್ವಾಮಿರವರು ಓಡಿ ಹೋಗುತ್ತಿದ್ದಾಗ, 1 ರಿಂದ 3 ನೇ ಆರೋಪಿತರು ನಾರಾಯಣಸ್ವಾಮಿರವರನ್ನು ಮಚ್ಚಿನಿಂದ ಹೊಡೆದಿರುತ್ತಾರೆ ಎಂದು ಹೇಳಿರುತ್ತಾರೆ. 1 ಮತ್ತು 6 ನೇ ಆರೋಪಿತರ ಅಕ್ರಮ ಸಂಬಂಧಕ್ಕೆ ನಾರಾಯಣಸ್ವಾಮಿ ಅಡ್ಡಿ ಪಡಿಸಿದ್ದಾರೆ ಎಂದು, ಅವರನ್ನು 1 ರಿಂದ 3 ನೇ ಆರೋಪಿತರು ಕೊಲೆ ಮಾಡಿರುತ್ತಾರೆ. ಸಾಕ್ಷಿಗೆ ನಿಪಿ 9 ರಿಂದ 12 ಪೋಟೋಗಳನ್ನು ತೋರಿಸಲಾಗಿ, ಸದರಿ ಪೋಟೋಗಳಲ್ಲಿರುವ ಓಮಿನಿ ಕಾರು ನಾರಾಯಣಸ್ವಾಮಿರವರ ಓಮಿನಿ ಕಾರು ಎಂದು

| | |
|---|---|
| ಪ್ರಾಸಾ | 03 |
| ಚಾಸಾ | 05 |

ಗುರುತಿಸಿರುತ್ತಾರೆ.

5. ಸದರಿ ಘಟನೆಯ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ 1 ರಿಂದ 4ನೇ ಆರೋಪಿತರ ಪರ ಶ್ರೀಎಂಜಿ ಎಸ್ ಆರ್ ವಕೀಲರಿಂದಃ**

6. ನನ್ನ ಗಂಡ ನಾರಾಯಣಸ್ವಾಮಿರವರು ಬಡ್ಡಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಜಮೀನಿನ ಸಮಸ್ಯೆಗಳ ಬಗ್ಗೆ ತಾಲ್ಲೂಕು ಕಚೇರಿಯಲ್ಲಿ ಹೋಗಿ ನನ್ನ ಗಂಡ ನಾರಾಯಣಸ್ವಾಮಿರವರು ಪರಿಹರಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಗಂಡ ನಾರಾಯಣಸ್ವಾಮಿರವರು ರಿಯಲ್ ಎಸ್ಟೇಟ್ ಕೆಲಸ ಮಾಡುತ್ತಿದ್ದುದರಿಂದ ಅವರಿಗೆ ಸಾಕಷ್ಟು ಜನ ಶತ್ರುಗಳು ಇದ್ದರು ಎಂದರೆ ಸರಿಯಲ್ಲ. ಮೊದಲು ನನ್ನ ಗಂಡ ನಾರಾಯಣಸ್ವಾಮಿರವರ ಮೇಲೆ ದಾಳಿ ಆಗಿ, ಅವರ ಕಾಲು ಮುರಿದು ಹೋಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮರ ಕೊಯ್ಯುವ ಯಂತ್ರದಿಂದ ಮರ ಕೊಯ್ಯುವ ಸಮಯದಲ್ಲಿ ಅವರ ಕಾಲಿಗೆ ಗಾಯವಾಗಿತ್ತು ಎಂದು ನುಡಿಯುತ್ತಾರೆ. ಸದರಿ ಚಾಸಾ-8 ಹಾಗೂ 6ನೇ ಆರೋಪಿಯ ಮನೆಯ ಬಳಿ ನಡೆದ ಘಟನೆ ಹಾಗೂ ನನ್ನ ಗಂಡ ನಾರಾಯಣಸ್ವಾಮಿರವರಗೂ, 1ನೇ ಆರೋಪಿಗೂ ಗಲಾಟೆ ಆಗಿದುದ್ದನ್ನು ನಾನು ನೋಡಿಲ್ಲ ಎಂದರೆ ಸರಿ. ಚಾಸಾ-8ರವರು ತನ್ನ ಮನೆಯ ಬಳಿ

| | |
|---|---|
| ಪ್ರಾಸಾ | 03 |
| ಚಾಸಾ | 05 |

ನಡೆದ ಘಟನೆಯನ್ನು ಬಂದು ನನ್ನ ಗಂಡ ನಾರಾಯಣಸ್ವಾಮಿರವರ ಬಳಿ ಹೇಳಿದಾಗ ನಾನು ಇರಲಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮನೆಯ ಹಸುಗಳಿಗೆ ಹುಲ್ಲು ತರಲು ಹೋಗಿ ಸಾಮಾನ್ಯವಾಗಿ ಮಧ್ಯಾಹ್ನ 2 ಗಂಟೆಗೆ ಮನೆಗೆ ವಾಪಸ್ಸು ಆಗುತ್ತಿದ್ದೆನು. ಚಾಸಾ-8 ರವರು ಘಟನೆಯ ಬಗ್ಗೆ ಹೇಳಿದರೆಂದು ಹೇಳಿದ ದಿನ ನಾನು ಹಾಗೂ ನನ್ನ ಗಂಡ ನಾರಾಯಣಸ್ವಾಮಿ ಹುಲ್ಲಿಗೆ ಹೋಗಿ, ಸಂಜೆ 5 ಗಂಟೆಗೆ ಮನೆಗೆ ಬಂದಿದ್ದೆವು. ಸದರಿ ದಿನದ ದಿನಾಂಕ, ವಾರವನ್ನು ನನಗೆ ಹೇಳಲು ಆಗುವುದಿಲ್ಲ.

7. ನನ್ನ ಗಂಡ ನಾರಾಯಣಸ್ವಾಮಿರವರು ಪೊಲೀಸ್ ಠಾಣೆಗೆ ಹೋಗುವುದು ಬೇಡ, ಊರಿನಲ್ಲಿ ಪಂಚಾಯಿತಿ ಮಾಡೋಣವೆಂದು ಹೇಳಿದ ವಿಚಾರವನ್ನು ಪೊಲೀಸರಿಗೆ ನಾನು ಹೇಳಿದ್ದೇನೆ. ಚಾಸಾ-8 ಹಾಗೂ 6ನೇ ಆರೋಪಿಯು ಯಾವಾಗ ಪೊಲೀಸ್ ಠಾಣೆಗೆ ಹೋದರು ಎಂದು ನನಗೆ ಗೊತ್ತಿಲ್ಲ. ನಾನು ಠಾಣೆಗೆ ಹೋಗಿಲ್ಲದೇ ಇದ್ದ ಕಾರಣದಿಂದ ಪೊಲೀಸ್ ಠಾಣೆಯಲ್ಲಿ ಏನು ಮಾತುಕತೆ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

8. ನಮ್ಮ ಊರಿನಲ್ಲಿ ನಡೆದ ಪಂಚಾಯಿತಿಯಲ್ಲಿ ಏನು ಮಾತುಕತೆಯಾಯಿತು ಎಂದು ನನಗೆ ಗೊತ್ತಿಲ್ಲ. ಸದರಿ ಪಂಚಾಯಿತಿಗೆ ನಾನು ಹೋಗಿಲ್ಲ.

| | |
|---|---|
| ಪ್ರಾಸಾ | 03 |
| ಚಾಸಾ | 05 |

9. ಸದರಿ ಘಟನೆ ನಡೆದ ದಿನದಂದು ನಾನು ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಮಧ್ಯಾಹ್ನ 12.30-1 ಗಂಟೆಗೆ ಹೋಗಿದ್ದೆವು. ಆ ದಿನ ಮಧ್ಯಾಹ್ನ 3 ಗಂಟೆ ಸಮಯಕ್ಕೆ ಮನೆಗೆ ವಾಪಸ್ಸು ಆಗಿದ್ದೆವು. ನನ್ನ ಬಳಿ ಮೊಬೈಲ್ ಫೋನ್ ಇರುವುದಿಲ್ಲ, ನನ್ನ ಮಗ ಅಜಿತ್ ಕುಮಾರ್ ಬಳಿ ಸಹ ಮೊಬೈಲ್ ಫೋನ್ ಇರುವುದಿಲ್ಲ. ಸದರಿ ದಿನದಂದು 1ನೇ ಆರೋಪಿಯು ನಾವು ಆಸ್ಪತ್ರೆಗೆ ಹೋಗುವ ಸಮಯದಲ್ಲಿ ದ್ವಿಚಕ್ರವಾಹನದಲ್ಲಿ ಬಂದು ಬೆದರಿಕೆ ಹಾಕಿದ್ದನು ಎಂದು ನನ್ನ ಗಂಡ ನಾರಾಯಣಸ್ವಾಮಿರವರಿಗೆ ಹೇಳಿಲ್ಲ ಎಂದರೆ ಸಾಕ್ಷಿಯು ಸಂಜೆ ನನ್ನ ಗಂಡ ನಾರಾಯಣಸ್ವಾಮಿರವರು ಮನೆಗೆ ಬಂದ ನಂತರ ತಿಳಿಸೋಣವೆಂದು ಇದ್ದೆವು ಎಂದು ಹೇಳುತ್ತಾರೆ. ಸದರಿ 1ನೇ ಆರೋಪಿಯು ಆ ದಿನ ಬೆದರಿಕೆ ಹಾಕಿದ ಬಗ್ಗೆ, ಶಿಡ್ಲಘಟ್ಟಕ್ಕೆ ಹೋದಾಗ ಠಾಣೆಯಲ್ಲಿ ದೂರು ನೀಡಿಲ್ಲ. ಸದರಿ 1ನೇ ಆರೋಪಿಯು ಬೆದರಿಕೆ ಹಾಕಿದ ಸಮಯದಲ್ಲಿ ಬೇರೆ ಯಾರು ಇರಲಿಲ್ಲ. ಸಾಕ್ಷಿ ಮುಂದುವರೆದು ದ್ಯಾವಪ್ಪನ ಗುಡಿ ಬಳಿ ಜನ ಇದ್ದರು ಎಂದು ಹೇಳುತ್ತಾರೆ. ಸದರಿ ದ್ಯಾವಪ್ಪನ ಗುಡಿಯಿಂದ ಸುಮಾರು 10-12 ಮೀಟರ್ ದೂರ ಬಂದಿದ್ದಾಗ 1ನೇ ಆರೋಪಿಯು ಬೆದರಿಕೆ ಹಾಕಿದ್ದನು. ದ್ಯಾವಪ್ಪನಗುಡಿಯ ಬಳಿ ಇದ್ದ ಜನರಿಗೆ ಸದರಿ ಬೆದರಿಕೆಯ ಬಗ್ಗೆ, ನಾವು ಬಂದು ಹೇಳಿಲ್ಲ. ಆಸ್ಪತ್ರೆಯಿಂದ ವಾಪಸ್ಸು ಆದ ನಂತರ ಸದರಿ ಬೆದರಿಕೆಯ ವಿಚಾರವನ್ನು ಯಾರಿಗೂ ಹೇಳಿಲ್ಲ. ಆ ದಿನ ನನ್ನ ಗಂಡ

| | |
|---|---|
| ಪ್ರಾಸಾ | 03 |
| ಚಾಸಾ | 05 |

ನಾರಾಯಣಸ್ವಾಮಿರವರಿಗೆ ಬೇರೆಯವರ ಫೋನ್ ನಿಂದ ನಾನು ಕರೆ ಮಾಡಿಲ್ಲ. ನನಗೆ ಸೊಂಟ ನೋವು ಇದುದ್ದರಿಂದ ನಾನು ಆ ದಿನ ಶಿಡ್ಲಘಟ್ಟ ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ವೈದ್ಯರು ಔಷಧಿ ನೀಡಿರುತ್ತಾರೆ. ಸದರಿ ಆಸ್ಪತ್ರೆಯ ದಾಖಲಾತಿಗಳನ್ನು ನಾನು ಪೊಲೀಸರಿಗೆ ನೀಡಿಲ್ಲ. ಆ ದಿನ ನಾನು ಆಸ್ಪತ್ರೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ದ್ಯಾವಪ್ಪನ ಗುಡಿಯ ಬಳಿ ನಾವು ಆಸ್ಪತ್ರೆಗೆ ಹೋಗುತ್ತಿದ್ದಾಗ, 1 ನೇ ಆರೋಪಿಯು ನನ್ನ ಗಂಡ ನಾರಾಯಣಸ್ವಾಮಿರವರಿಗೆ ಬೆದರಿಕೆ ಹಾಕಿರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡು ಒಂದು ವಾರ ಅಥವಾ 15 ದಿನಗಳ ನಂತರ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೆನು. ನನ್ನ ಗಂಡ ನಾರಾಯಣಸ್ವಾಮಿರವರ ಮರಣದ ವಿಚಾರದಲ್ಲಿ ಪೊಲೀಸರು ನಮ್ಮ ಊರಿಗೆ ಬಂದಿರುವುದನ್ನು ನಾನು ನೋಡಿಲ್ಲ.

10. ಚಾಸಾ-2 ಮತ್ತು ಚಾಸಾ-3 ರವರು ಬಂದು ನನ್ನ ಗಂಡ ನಾರಾಯಣಸ್ವಾಮಿ ರವರನ್ನು 1 ರಿಂದ 3 ನೇ ಆರೋಪಿತರು ಖಾರದ ಪುಡಿಯನ್ನು ಎರಚಿ, ಮಚ್ಚಿನಿಂದ ಹೊಡೆದಿದ್ದಾರೆಂದು ಹೇಳಿರುವ ವಿಚಾರವನ್ನು ನಾನು ಪೊಲೀಸರಿಗೆ ಹೇಳಿಲ್ಲ. ಚಾಸಾ-2 ಮತ್ತು ಚಾಸಾ-3 ರವರು ಬಂದು ಸದರಿ ನನ್ನ ಗಂಡ ನಾರಾಯಣಸ್ವಾಮಿರವರನ್ನು 1 ಮತ್ತು 3 ನೇ ಆರೋಪಿತರು ಮಚ್ಚಿನಿಂದ ಹೊಡೆದರು ಎಂದು ಹೇಳಿದರು ಎಂದು

| ಪ್ರಾಸಾ | 03 |
|---|---|
| ಚಾಸಾ | 05 |

ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ. ಚಾಸಾ-2 ಮತ್ತು ಚಾಸಾ-3 ರವರು ಬಂದು ಯಾವುದೇ ವಿಚಾರವನ್ನು ನನಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. 1 ಮತ್ತು 6 ನೇ ಆರೋಪಿತರ ನಡುವಿನ ಅಕ್ರಮ ಸಂಬಂಧವನ್ನು ನಾನು ಖುದ್ದಾಗಿ ನೋಡಿಲ್ಲ. ಆರೋಪಿತರಿಗೂ, ನನ್ನ ಗಂಡ ನಾರಾಯಣಸ್ವಾಮಿರವರು ಮರಣಹೊಂದಿರುವುದಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. 1 ಹಾಗೂ 6 ನೇ ಆರೋಪಿಯ ನಡುವೆ ಅಕ್ರಮ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. 6 ನೇ ಆರೋಪಿಯ ಕುಮ್ಮಕ್ಕಿನಿಂದ 1 ನೇ ಆರೋಪಿ ನನ್ನ ಗಂಡ ನಾರಾಯಣಸ್ವಾಮಿರವರನ್ನು ಕೊಲೆ ಮಾಡಿದ್ದಾರೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

11. ನನ್ನ ಗಂಡ ನಾರಾಯಣಸ್ವಾಮಿರವರು ಕೊಲೆಯಾದ 10-15 ದಿನಗಳ ನಂತರ ನಿಜವಾದ ಆರೋಪಿತರನ್ನು ಪತ್ತೆ ಮಾಡುವಂತೆ ಡಿಎಸ್ ಎಸ್ ಸಂಘಟನೆಯವರು ಶಿಡ್ಲಘಟ್ಟ ನಗರ ಬಂದ್ ಮಾಡಿದ್ದರು ಎಂದರೆ ಸರಿ. ನನಗೆ ಯಾವುದೇ ವಿಚಾರಗಳು ಗೊತ್ತಿಲ್ಲದೇ ಇದ್ದರು ಸಹ ಪೊಲೀಸರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

| | |
|---|---|
| ಪ್ರಾಸಾ | 03 |
| ಚಾಸಾ | 05 |

**ಪಾಟೀ ಸವಾಲು: 5 ನೇ ಆರೋಪಿ ಪರ ಶ್ರೀ ಕೆ ಎಂ ಎಂ ವಕೀಲರಿಂದ:**

ಕುಮಾರಿ ಇ ವಿ ವಕೀಲರು ಶ್ರೀ ಕೆ ಎಂ ಎಂ ವಕೀಲರ ಪರ, 1 ರಿಂದ 4 ನೇ ಆರೋಪಿತರ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರುತ್ತಾರೆ. ಅವರ ಕೋರಿಕೆಯನ್ನು ಮನ್ನಿಸಿದೆ.

**ಪಾಟೀ ಸವಾಲು: 6 ನೇ ಆರೋಪಿ ಪರ ಶ್ರೀಹೆಚ್ ಸಿ ಪಿ ವಕೀಲರಿಂದ:**

ಶ್ರೀ ಹೆಚ್ ಸಿ ಪಿ ವಕೀಲರು, 6 ನೇ ಆರೋಪಿತರ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರುತ್ತಾರೆ. ಅವರ ಕೋರಿಕೆಯನ್ನು ಮನ್ನಿಸಿದೆ.

**ಮರುವಿಚಾರಣೆ: ಇಲ್ಲ.**

**(ದಿನಾಂಕ: 12.07.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಶಿವಪ್ರಸಾದ್.ಕೆ.ಬಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**